# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:–** ಶ್ರೀ ರಾಮಸ್ವಾಮಿ, ಜೈಲರ್ ಮತ್ತು ಶ್ರೀ ಸುಂದರ್ ರಾವ್, ಅಧೀಕ್ಷಕರು, ಜಿಲ್ಲಾ ಉಪ ಕಾರಾಗೃಹ, ಮಂಡ್ಯ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ.

**ಓದಲಾಗಿದೆ:–** ಉಪ ನಿಬಂಧಕರು ವಿಚಾರಣೆಗಳು–4, ಕರ್ನಾಟಕ ಲೋಕಾಯುಕ್ತ ಕಛೇರಿ ಇವರ ಪತ್ರ ಸಂಖ್ಯೆ: ಕಂಪ್ಲೇಂಟ್/ಉಪಲೋಕಾ/ಎಂವೈಎಸ್–484/2011 /ಡಿಆರ್ಇ–4 ದಿನಾಂಕ: 25–10–2014

*******

**ಪ್ರಸ್ತಾವನೆ:–**

ಮೇಲೆ ಓದಲಾದ ಪತ್ರದಲ್ಲಿ ತಿಳಿಸಿರುವಂತೆ ಮಂಡ್ಯ ಜಿಲ್ಲಾ ಉಪ ಕಾರಾಗೃಹದಲ್ಲಿ ವಿಚಾರಣಾಧೀನ ಬಂದಿ ತಿಮ್ಮಯ್ಯ ಬಿನ್ ಲೇಟ್ ಸಣ್ಣಬೋಯಿ, ಕೋಡಿದೊಡ್ಡಿ ತಾನು ಚೆಕ್ ಪೋಸ್ಟ್‌ಗೆ ಸಂಬಂಧಿಸಿದ ಹಾಗೆ 03 ತಿಂಗಳು ಸಜಾ ಆಗಿದ್ದು, ದಿನಾಂಕ: 28–06–2011ರಂದು ಬಿಡುಗಡೆಯಾಗಬೇಕಾಗಿದ್ದು, ಜೈಲರ್ ಶ್ರೀ ರಾಮಸ್ವಾಮಿ ಹಾಗೂ ಶ್ರೀ ಸುಂದರ್ ರಾವ್, ಅಧೀಕ್ಷಕರು ಇವರಿಗೆ ರೂ.5000/– ಲಂಚ ಕೊಡದ ಕಾರಣ ದಿನಾಂಕ: 22–08–2011 ರಂದು ಬಿಡುಗಡೆಗೊಳಿಸಿರುವುದು ಹಾಗೂ ಈ ಹಿನ್ನಲೆಯಲ್ಲಿ, ಉಪ ನಿಬಂಧಕರು ವಿಚಾರಣೆಗಳು–4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 12(3) ರನ್ವಯ ಮೂಲ ವರದಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಸರ್ಕಾರಕ್ಕೆ ಕಳುಹಿಸಿಕೊಡುತ್ತಾ ಸಕ್ಷಮ ಪ್ರಾಧಿಕಾರವು ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4)ರ ಪ್ರಕಾರ ಸಂಸ್ಥೆಗೆ ವರದಿ ಮಾಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 151 ಪಿಆರ್ಇ 2014,**
**ಬೆಂಗಳೂರು, ದಿನಾಂಕ: 08.12.2014**

ಮಂಡ್ಯ ಜಿಲ್ಲಾ ಉಪ ಕಾರಾಗೃಹದಲ್ಲಿ ವಿಚಾರಣಾಧೀನ ಬಂದಿ ತಿಮ್ಮಯ್ಯ ಬಿನ್ ಲೇಟ್ ಸಣ್ಣಬೋಯಿ, ಕೋಡಿದೊಡ್ಡಿ ತಾನು ಚೆಕ್ ಪೋಸ್ಟ್‌ಗೆ ಸಂಬಂಧಿಸಿದಂತೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಕಲಂ 12(4)ರ ಪ್ರಕಾರ ಆಪಾದಿತರಾದ ಶ್ರೀ ರಾಮಸ್ವಾಮಿ, ಜೈಲರ್ ಮತ್ತು ಶ್ರೀ ಸುಂದರ್ ರಾವ್, ಅಧೀಕ್ಷಕರು , ಜಿಲ್ಲಾ ಉಪ ಕಾರಾಗೃಹ, ಮಂಡ್ಯ ಜಿಲ್ಲೆ ಇವರ ವಿರುದ್ಧ ಸರ್ಕಾರವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕೆ.ಸಿ.ಎಸ್ (ಸಿ.ಸಿ.ಎ), 1957ರ ನಿಯಮ 14(ಎ) ಪ್ರಕಾರ ಲೋಕಾಯುಕ್ತ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಯಿಂದ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿದ್ದು, ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಿ.ಎಸ್.ಜೋಗೋಜೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

**ಇವರಿಗೆ:–**

1. ಮಹಾಲೇಖಪಾಲರು (ತನಿಖೆ–1, ತನಿಖೆ–2 ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಉಪ ನಿಬಂಧಕರು ವಿಚಾರಣೆಗಳು–4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ನಂ.4, ಶೇಷಾದ್ರಿ ರಸ್ತೆ, ಬೆಂಗಳೂರು.
4. ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ.
5. ಶ್ರೀ ರಾಮಸ್ವಾಮಿ, ಜೈಲರ್, ಜಿಲ್ಲಾ ಉಪ ಕಾರಾಗೃಹ, ಮಂಡ್ಯ.
6. ಶ್ರೀ ಸುಂದರ್ ರಾವ್, ಅಧೀಕ್ಷಕರು, ಜಿಲ್ಲಾ ಉಪ ಕಾರಾಗೃಹ, ಮಂಡ್ಯ.
7. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಿಸಿಎಎಸ್), ಒಳಾಡಳಿತ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,. ವಿಧಾನಸೌಧ, ಬೆಂಗಳೂರು
10. ಸರ್ಕಾರದ ಉಪ ಕಾರ್ಯದರ್ಶಿ (ಕಾನೂನು ಮತ್ತು ಸುವ್ಯವಸ್ಥೆ), ಒಳಾಡಳಿತ ಇಲಾಖೆ ಇವರ ಆಪ್ತ ಸಹಾಯಕರು, ವಿಧಾನ ಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಸಮನ್ವಯ), ವಿಧಾನಸೌಧ, ಬೆಂಗಳೂರು.
12. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು